

ಆಕೆ ಕೂಡು ಕುಟುಂಬದ ಮುದ್ದಿನ ಮಗಳು. ಮದುವೆಯಾಗಿ ನಾಲ್ಕು ವರ್ಷಗಳಾದರೂ ಸಂತಾನಭಾಗ್ಯವಿಲ್ಲದ ಆಕೆ ಇನ್ನಾವ ಚಿಕಿತ್ಸೆಯಿಂದಲೂ ಮಗುವನ್ನು ಪಡೆಯಲು ಸಾಧ್ಯವಿಲ್ಲ ಎಂದು ವೈದ್ಯರೂ ಕೈಚೆಲ್ಲುತ್ತಾರೆ. ದತ್ತು ಮಗು ಪಡೆಯಲು ಅತ್ತೆ– ಮಾವನಿಗೆ ಮನಸ್ಸಿಲ್ಲ. ಆಗ ಆ ಹೆಣ್ಣುಮಗಳ ನೆರವಿಗೆ ಬಂದಿದ್ದು ತವರುಮನೆಯವರು. ಈಗಾಗಲೇ ಎರಡು ಮಕ್ಕಳ ತಾಯಿಯಾಗಿರುವ ಸೊಸೆಗೆ, ಮಗಳು– ಅಳಿಯನ ಮಗುವನ್ನು ಗರ್ಭದಲ್ಲಿ ಧರಿಸಿ ಹೆತ್ತು ಕೊಡುವಂತೆ ಹಿರಿಯರಿಂದ ತಾಕೀತು.

ಇದು ಟಿವಿಯ ಟಿಪಿಕಲ್ ಸಾಸ್ – ಬಹೂ ಧಾರಾವಾಹಿಯ ಕಥೆ ಇರಬಹುದು. ಆದರೆ ಕೇಂದ್ರ ಸಂಪುಟ ಇತ್ತೀಚೆಗೆ ಒಪ್ಪಿಗೆ ನೀಡಿರುವ ಬಾಡಿಗೆ ತಾಯ್ತನ ನಿಯಂತ್ರಿಸುವ ಮಸೂದೆಯಿಂದಾಗಿ ಇಂತಹ 'ಪರಹಿತ ತಾಯ್ತನ'ದ ಕಥೆಗಳು ಹಕೀಕತ್ತಾಗಿ ಬದಲಾಗುವ ದಿನಗಳು ದೂರವಿಲ್ಲ.

ಮಕ್ಕಳಿಲ್ಲದವರಿಗೆ, ದತ್ತು ಪಡೆಯಲು ಇಚ್ಛಿಸದೆ ತಮ್ಮದೇ ಮಗುವಿನ ನಿರೀಕ್ಷೆಯಲ್ಲಿರುವವರಿಗೆ ವರದಾನವಾಗಿದ್ದ ಈ ಬಾಡಿಗೆ ತಾಯ್ತನ ಕಳೆದ ಕೆಲವು ವರ್ಷಗಳಿಂದ ಉದ್ಯಮವಾಗಿ ಬೆಳೆದು ಕಾನೂನಿನ ಹಂಗಿಲ್ಲದೆ ಕೆಲವೊಂದು ಅನಾಹುತಗಳಿಗೆ ಕಾರಣವಾಗಿತ್ತು. ಅದನ್ನು ಕಾನೂನಿನ ಅಡಿಯಲ್ಲಿ ತಂದು ನಿಯಂತ್ರಿಸ ಹೊರಟಿರುವ ಸರ್ಕಾರ ಒಂದೆಡೆ ಶೋಷಣೆಗೆ, ವಂಚನೆಗೆ ಮೂಗುದಾರ ಹಾಕಲು ಯತ್ನಿಸುತ್ತಿದೆ; ಇನ್ನೊಂದು ಕಡೆ ಸಂತಾನವಿಲ್ಲದೇ ನೊಂದಿರುವವರು ಮತ್ತೊಂದು ರೀತಿಯಲ್ಲಿ ಮಹಿಳೆಯರ ಶೋಷಣೆ ನಡೆಸಲು ಅನುವು ಮಾಡಿಕೊಡಬಹುದು ಎಂಬ ಅನುಮಾನ ಕಾಡುತ್ತಿದೆ.

ಭಾರತ 15 ವರ್ಷಗಳ ಹಿಂದೆಯೇ ಆರೋಗ್ಯ ಕ್ಷೇತ್ರದಲ್ಲಿ ಅಗಾಧ ಪರಿಣತಿ ಸಾಧಿಸಿತು. ಮೆಡಿಕಲ್ ಟೂರಿಸಂ ವಿದೇಶೀಯರ ಪ್ರಮುಖ ಆಕರ್ಷಣೆಯಾಯಿತು. ಸುಲಭವಾಗಿ ಸಿಗುವ ಮೆಡಿಕಲ್ ವೀಸಾ, ಅಮೆರಿಕನ್ ಇಂಗ್ಲಿಷ್ ಶೈಲಿಯಲ್ಲಿ ಮಾತನಾಡಬಲ್ಲಂತಹ ಮಧ್ಯವರ್ತಿಗಳು, ನೇರ ವಿಮಾನ ನಿಲ್ದಾಣದಲ್ಲೇ ಸ್ವಾಗತಿಸಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತಹ ಆದರಾತಿಥ್ಯ, ನಂತರ ಪ್ರವಾಸಿ ತಾಣಗಳ ಸುತ್ತಾಟ...

